# ನ್ಯಾಯ ಪರ್ವ

ತಾನು ಸನಾತನ ಧರ್ಮವನ್ನು ಪಾಲಿಸುತ್ತಿರುವ ವ್ಯಕ್ತಿ ಎಂದು ಹೇಳಿಕೊಂಡ ಹಿರಿಯ ವಕೀಲರೊಬ್ಬರು ಉಚ್ಚನ್ಯಾಯಮೂರ್ತಿಯೊಬ್ಬರ ಮೇಲೆ ಹಾಡಹಗಲೇ ಎಸೆಯಬಾರದನ್ನು ಎಸೆದ ಪ್ರಕರಣವನ್ನು ನೋಡಿದಾಗ ಮನಸ್ಸು ಕದಡಿಹೋಗುತ್ತದೆ. ಈ ಘಟನೆ ನಡೆದ ಮೇಲೆ ಸನಾತನ ಧರ್ಮಪಾಲಕ ಆ ಹಿರಿಯ ವಕೀಲರನ್ನು ನ್ಯಾಯಮೂರ್ತಿ ಸಾರ್ವಜನಿಕವಾಗಿ ಕ್ಷಮಿಸಿ ತಾವು ದೊಡ್ಡವರ ಹಾದಿಯಲ್ಲಿ ನಡೆದರು. ಅವರು ಈ ನೆಲದಲ್ಲಿ ಅಂತರ್ಗತವಾಗಿರುವ ಕರುಣೆ, ಕ್ಷಮೆ, ದಯೆಯುಳ್ಳ 'ದಯೆಯೆ ಧರ್ಮದ ಮೂಲ' ಎನ್ನುವ ಉದಾರವಾದಿ ಪರಂಪರೆಯ ಪ್ರತಿನಿಧಿಯಾದರು. 'ಸದ್ಗುಣವು, ಯಾವ ಸದ್ದೂ ಮಾಡದೆ ಅರಳಿ ಪರಿಮಳ ಬೀರುವ ಹೂವಿನಂತೆ' ಎಂದು ಸಂತರು ಹೇಳುವುದು ಇದನ್ನೇ.

ಆದರೆ ಒಂದು ಕ್ಷಣ ನಾವು ಯೋಚಿಸಿದರೆ 'ವರ್ಣಾಶ್ರಮ ಧರ್ಮಪಾಲಕ' 'ಶೂ' ತೂರಿದ ಕ್ಷಣದಲ್ಲಿ ನ್ಯಾಯಾಧೀಶರು ಮನಸ್ಸಿನಲ್ಲಿ ನೋವು ಅನುಭವಿಸಲಿಲ್ಲವೆ? ಅವರು ಅನುಭವಿಸಿದ ಅವಮಾನ ಯಾವ ರೀತಿಯದ್ದು! ಆ ನೋವು, ಅವಮಾನ ಸನಾತನ ಧರ್ಮದ ಪಾಲಕನಾದ ವ್ಯಕ್ತಿಗೆ ತಿಳಿಯುವುದಿಲ್ಲ! ಕೊನೆಯ ಪಕ್ಷ ಅವನ ಒಂದು ಸಣ್ಣ ಪಶ್ಚಾತ್ತಾಪದ ಎಳೆಯಾದರೂ ಕಾಣಿಸುತ್ತದೆಯೇ, ಅದೂ ಇಲ್ಲ! ಏಕೆಂದರೆ ಅವರು ಈ ಬಗೆಯ ಅವಮಾನವನ್ನು ತಮ್ಮ ಜೀವಿತದಲ್ಲಿ ಒಂದು ಗಳಿಗೆಯೂ ಅನುಭವಿಸದವರಲ್ಲ! ನ್ಯಾಯಾಧೀಶರು ಅನುಭವಿಸಿದ ನೋವು ಈವೊತ್ತಿನದ್ದಲ್ಲ! ಅದು ಅವರೊಬ್ಬರದ್ದೂ ಅಲ್ಲ! ಇದು ಭಾರತದಲ್ಲಿ ದಿನ ನಿತ್ಯವೂ ಇಂತಹ ಜಾತಿ ಪ್ರೇರಿತ ದಾಳಿಗಳಿಗೆ ಒಳಗಾಗುತ್ತಾ ಅನುಭವಿಸುತ್ತಿರುವ ಅವಮಾನ ಮತ್ತು ಯಾತನೆಯನ್ನು ತಮ್ಮೊಳಗೇ ಅದುಮಿಟ್ಟುಕೊಂಡು ಬೇಯುತ್ತಿರುವ ದಲಿತ ಸಮುದಾಯದ ನೋವು. ಇವರಿಬ್ಬರಲ್ಲಿ ನಿಜವಾದ ಧರ್ಮದ ಅನುಯಾಯಿ ಯಾರು? ಎಂದು ಯಾವುದೇ ಶಾಲಾ ಬಾಲಕನನ್ನು ಪ್ರಶ್ನಿಸಿದರೂ ಅವನು ತಡವರಿಸದೆ ಉತ್ತರಿಸುತ್ತಾನೆ.

ಈಗ ಉಚ್ಚನ್ಯಾಯಾಲಯವು ಈ ಪ್ರಕರಣವನ್ನು ಮುಂದುವರೆಸದೆ ಮುಕ್ತಾಯಗೊಳಿಸುವುದಾಗಿ ಹೇಳಿದೆ. ಇದೂ ಕೂಡ ದೊಡ್ಡತನವೇ. ಈ ಘಟನೆಯನ್ನು ಭಾರತ ಎಷ್ಟು ಖಂಡಿಸಬೇಕಾಗಿತ್ತೊ ಅಷ್ಟು ಖಂಡಿಸಲಿಲ್ಲ ಎನ್ನುವುದು ನಮ್ಮ ಅನುಭವಕ್ಕೆ ಬಂದಿದೆ. ಒಂದು ವೇಳೆ ನ್ಯಾಯಪೀಠದಲ್ಲಿ ಉಚ್ಚವರ್ಗದವರು ಕುಳಿತಿದ್ದು, ಹೀಗೆ 'ಶೂ' ತೂರಿದ ವ್ಯಕ್ತಿ ಒಬ್ಬ ಮುಸ್ಲಿಮನೊ ಅಥವಾ ಒಬ್ಬ ದಲಿತನೊ ಆಗಿದ್ದರೆ ಏನಾಗುತ್ತಿತ್ತು! ನಡೆಯುತ್ತಿದ್ದ ಹಿಂಸೆ, ರಕ್ತಪಾತದ ಬಗ್ಗೆ ಊಹಿಸಲು ಮನಸ್ಸು ನಿರಾಕರಿಸುತ್ತದೆ. ಇಂತಹವರ ಮನಸ್ಸಿನಲ್ಲಿ 'ಇವ ನಮ್ಮವ' ಎನ್ನುವ ಶಬ್ದಕ್ಕೆ ಜಾಗವೇ ಇರುವುದಿಲ್ಲ. ಎಲ್ಲರನ್ನೂ ಒಳಗೊಳ್ಳುವ ಸಮಾಜದ ಬಗ್ಗೆ ಅವರಿಗೆ ಗೌರವವಿಲ್ಲ, ಸಹಮತವಿಲ್ಲ ಎನ್ನುವುದನ್ನು ಮತ್ತೆ ಮತ್ತೆ ನಮ್ಮ ಕಣ್ಣಪಟಲದ ಮುಂದೆ ತೋರಿಸುತ್ತಿದ್ದಾರೆ. ಇದು ಈ ವ್ಯವಸ್ಥೆ ಕಳೆದುಕೊಂಡಿರುವ ನೈತಿಕತೆಯ ಪತನವನ್ನು ತೋರಿಸುತ್ತದೆ. ಹಾಗಾದರೆ ನ್ಯಾಯದೇವತೆಯ ಕಣ್ಣಿಗೆ ಕಟ್ಟಿರುವ ಕಪ್ಪುಬಟ್ಟೆ ಕೇವಲ ಸಾಂಕೇತಿಕವೊ ಅಥವಾ ವಾಸ್ತವವೊ!

ದಲಿತ ಸಮುದಾಯದವರಿಗೆ ಮೂತ್ರ ಕುಡಿಸುವ, ಅತ್ಯಾಚಾರ ಎಸಗಿ ಸುಟ್ಟುಹಾಕುವ, ಹಾಡಹಗಲೇ ಕೊಚ್ಚಿಹಾಕುವ ದೇಶದಲ್ಲಿ ಮುಖ್ಯನಾಯಮೂರ್ತಿಯೊಬ್ಬರ ಮೇಲೆ 'ಶೂ' ತೂರುವ ಕೃತ್ಯ ಭಾರತದಲ್ಲಿ ಆಕಸ್ಮಿಕವೇನಲ್ಲ! ಈ ಅಸಹನೆ ಬೇರೆ ಕಾರಣಕ್ಕಲ್ಲ! ಅವರು ದಲಿತ ಸಮುದಾಯದವರು ಎನ್ನುವ ಒಂದೇ ಕಾರಣಕ್ಕೆ ನಡೆದಿರುವುದು ಎನ್ನುವುದಕ್ಕೆ ಸಾಕ್ಷಿಗಳನ್ನು ಹುಡುಕಬೇಕಿಲ್ಲ! ದಲಿತರು ಮತ್ತು ದಮನಿತರ ಮೇಲೆ ದಿನನಿತ್ಯ ನಡೆಯುತ್ತಿರುವ ಹಿಂಸೆಯನ್ನು ನಾವು ರೂಪಕವೊ ಅಥವಾ ಸಂಕೇತಗಳೆಂದು ಭಾವಿಸುವಂತಿಲ್ಲ! ಹಿಂದೆ ಕೇವಲ 'ಚಿಂತನೆ'ಯ ರೂಪದಲ್ಲಿದ್ದ ಇವೆಲ್ಲವೂ ಈಗ ವಾಸ್ತವವಾಗುತ್ತಿವೆ. ಈ ಘಟನೆ ದೇಶದ ಸಾಮರಸ್ಯ ಮತ್ತು ಸಮಬಾಳಿನ ಆಶಯಗಳನ್ನೇ ಬುಡಮೇಲು ಮಾಡುವ ಬರ್ಬರ ಕೃತ್ಯವೆಂದು ತಿಳಿಯಬೇಕಾಗುತ್ತದೆ.

ರಾಮಾಯಣದಲ್ಲಿ ಬರುವ 'ಶಂಭೂಕ ವಧೆ' ಪ್ರಸಂಗವನ್ನು ಕೇಂದ್ರವಾಗಿರಿಸಿಕೊಂಡರೂ ಕುವೆಂಪು ಆ ಘಟನೆಯನ್ನೇ ಹೊಸ ಕಾಲಕ್ಕೆ ಅನುಗುಣವಾಗಿ ಮುರಿದು ಹೊಸ ಕಣ್ನೋಟದಲ್ಲಿ ಕಟ್ಟಿಕೊಟ್ಟಿರುವ 'ಶೂದ್ರ ತಪಸ್ವಿ' ನಾಟಕ, ಸನಾತನ ಧರ್ಮ ಹೇಳುವ ಜಾತಿ ಶ್ರೇಷ್ಠತೆಯ ಅಹಂಕಾರವನ್ನು ಮಣಿಸಿ, ದ್ವಿಜರಂತೆ ಶೂದ್ರರೂ ತಪಸ್ಸಿಗೆ ಅರ್ಹರು ಎನ್ನುವುದನ್ನು ಕಾಣಿಸುವುದೇ ಇದರ ದರ್ಶನ ಆಗಿದೆ. ಹೀಗಾಗಿ 'ಶೂದ್ರ ತಪಸ್ವಿ' ಇಂದಿನ ಭಾರತವನ್ನು ತೋರಿಸುವ ನಾಟಕ. ಉಚ್ಚನ್ಯಾಯಾಲಯದಲ್ಲಿ ನಡೆದಿರುವ ಘಟನೆ ಈ ನಾಟಕವನ್ನು ನೆನಪಿಗೆ ತರುತ್ತದೆ.

ಇದರ ಬೆನ್ನಿಗೇ ರಾಜ್ಯವೊಂದರ ಮುಖ್ಯ ನ್ಯಾಯಾಲಯದಲ್ಲಿ ಸಾರ್ವಜನಿಕರ ಎದುರಿನಲ್ಲೇ ನ್ಯಾಯಾಧೀಶರಿಗೆ ಛೀಮಾರಿ ಹಾಕುವ ಪ್ರಸಂಗವೂ ನಡೆದಿದೆ. ಇದೂ ಕೂಡ ಆಕಸ್ಮಿಕವಲ್ಲ! ಈ ಎಲ್ಲ ಘಟನೆಗಳ ಹಿನ್ನೆಲೆಯಲ್ಲಿರುವುದು 'ಜಾತಿ ಶ್ರೇಷ್ಠತೆ'ಯ ವ್ಯಸನವೇ ಹೊರತು ಮತ್ತಾವುದೂ ಅಲ್ಲ! ಅಂತಿಮವಾಗಿ ಇವೆಲ್ಲ ಸಾಮರಸ್ಯವನ್ನು ಕದಡುವ ಅಶಾಂತಿಯ ಕೃತ್ಯಗಳು. ನಮ್ಮದು 'ಸನಾತನ ಧರ್ಮ' ಎಂದು ಹೇಳುವವರು ದೇಶದ ಉನ್ನತ ನ್ಯಾಯಾಂಗಕ್ಕೆ ತೋರುವ ಗೌರವವೇ ಇದು! ಎಂದು ಭಾರತ ಕೇಳಬೇಕಾಗುತ್ತದೆ. ಈ ಘಟನೆಯು ಎಲ್ಲವನ್ನೂ ಸುಟ್ಟು ಬೂದಿಮಾಡುವ ಸ್ವಯಂ ವಿನಾಶದ ಸ್ವಧರ್ಮವೇ ಆಗಿದೆ. ಭಾರತದ ನದಿಗಳು ಕೆಡುವಂತೆ, ಧರ್ಮವೂ ಅದರ ಅನುಯಾಯಿಗಳಿಂದ ಆಗಾಗ್ಗೆ ಕೆಡುತ್ತದೆ ಎನ್ನುವುದನ್ನು ಕಳೆದ ಮೂರೂವರೆ ದಶಕಗಳಿಂದಲೂ ನಾವು ನೋಡುತ್ತಿದ್ದೇವೆ.

ಸನಾತನ ಧರ್ಮದ ತಿರುಳು ಇರುವುದು ದೇವರಲ್ಲಲ್ಲ! ಹೊತ್ತಗೆಗಳಲ್ಲಲ್ಲ! ಬದಲಾಗಿ ಪ್ರೇಮ ಮತ್ತು ಕರುಣೆಯನ್ನು ಪಾಲಿಸುವ ಉದಾರ ಬದುಕಿನಲ್ಲಿದೆ ಎಂಬುದನ್ನು ನ್ಯಾಯಾಂಗದ ಮೇಲೆ ಹಲ್ಲೆ ಮಾಡುವ ಮನಸ್ಥಿತಿಯವರು ಅರಿತಿಲ್ಲ! ಇದು ಸಂವಿಧಾನ ವಿರೋಧಿಯಾದದ್ದು ಮತ್ತು ಅಂತಿಮವಾಗಿ ಮಾನವ ವಿರೋಧಿಯಾದದ್ದು. ನಿಜವಾದ ಸನಾತನ ಧರ್ಮ ಯಾವುದೆಂಬುದನ್ನು ಹೀಗೆ ಹೇಳಿದ್ದಾರೆ: 'ಪ್ರತಿಯೊಂದು ಜೀವಿಯೂ, ಬೇರೊಂದು ಜೀವಿಯೂ ಒಂದೇ ಎಂದು ಕಾಣುವುದು. ಯಾರು ಎಲ್ಲ ಜೀವಿಗಳನ್ನೂ ತನ್ನಲ್ಲಿ ಕಾಣುವನೋ ಮತ್ತು ತನ್ನನ್ನು ಎಲ್ಲಾ ಜೀವಿಗಳಲ್ಲಿ ಕಾಣುವನೋ ಆಗ ಅವನಿಗೆ ಅಶಾಂತಿಯಿಲ್ಲ. ಯಾವ ಭ್ರಮೆ, ಯಾವ ದುಃಖ ಅವನಲ್ಲಿರಲು ಸಾಧ್ಯವಿಲ್ಲ' ಆದ್ದರಿಂದ ಶುದ್ಧ ಧಾರ್ಮಿಕ ವ್ಯಕ್ತಿಗಳು ವಿವಾದ ಮಾಡುವುದಿಲ್ಲ; ವಿವಾದ ಮಾಡುವವರು ಧಾರ್ಮಿಕ ವ್ಯಕ್ತಿಗಳಾಗಿರುವುದಿಲ್ಲ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಅಧಿಕಾರ ಎಂದರೆ ಮುಟ್ಟಿದ್ದನ್ನೆಲ್ಲ ಕಲುಷಿತಗೊಳಿಸುವುದು.

  —ಪಿ.ಬಿ. ಶೆಲ್ಲಿ
- ಅನುಭವದಿಂದ ಪಾಠ ಕಲಿಯಬೇಕಾದರೆ ತಪ್ಪು ಮಾಡಿ ಅದರ ಬೆಲೆಯನ್ನು ತೆತ್ತಬೇಕಾಗುತ್ತದೆ.

  —ಸಿಗ್ಮಂಡ್ ಫ್ರಾಯ್ಡ್
- ಇತಿಹಾಸವೆಂದರೆ ಕೇವಲ ರಾಜಕೀಯ ಪ್ರಸಂಗಗಳ ದಾಖಲೆಯಲ್ಲ. ಅದು ಒಂದು ಸಾಮುದಾಯಿಕ ಪ್ರಜ್ಞೆಯ ಸಾತತ್ಯ, ನಿರಂತರತೆ.

  —ಕೀರ್ತಿನಾಥ ಕುರ್ತಕೋಟಿ
- ಸಾವಿರ ಕಲ್ಲುದೇವರಿಗೆ ನೈವೇದ್ಯ ಮಾಡುವುದು ವ್ಯರ್ಥ, ಹಸಿದವನಿಗೆ ಅನ್ನವೀವುದು ಅರ್ಥ.

  —ಸಾ.ಶಿ. ಮರುಳಯ್ಯ
- ನಿಮ್ಮಲ್ಲಿ ಎಳ್ಳುಕಾಳಿನಷ್ಟು ಆತ್ಮವಿಶ್ವಾಸ ಇದ್ದರೂ ನಿಮಗೆ ಯಾವ ಕಾರ್ಯವೂ ಅಸಂಭವವಲ್ಲ.

  —ಯೇಸು
- ಗರ್ವವನ್ನು ತ್ಯಜಿಸುವವನು ಇತರರ ಪ್ರೀತಿಗೆ ಪಾತ್ರನಾಗುತ್ತಾನೆ.

  —ಮಹಾಭಾರತ
- ನಿರಾಶಾವಾದಿಯೆಂದರೆ ತನ್ನ ಉಪದೇಶವನ್ನು ಕೃತಿಗಿಳಿಸಲು ಯತ್ನಿಸಿದ ಆಶಾವಾದಿ.

  —ಎಲ್ಸನ್ ಸ್ಮಿತ್